ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR

ಆಡಳಿತ ವಿಭಾಗ registrarrur@gmail.com

ಕ್ರ. ಸಂ. ಆಶ್ರೀಮವಿರಾ/ಆಡಳಿತ/2025-26/ ೨೮೦೨ ದಿನಾಂಕ: 12-03-2026

ವಿಷಯ : ದಿನಾಂಕ 24.02.2026 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಕಳಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 24.02.2026 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಾಮಾನ್ಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

12/3

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,
ರಾಯಚೂರು

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

ಇವರಿಗೆ :

01. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560001.
02. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು-560001.
03. ವಿಶ್ವವಿದ್ಯಾನಿಲಯದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
04. ಆಯುಕ್ತರ/ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ.
05. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ಯಾಲೆಸ್ ರಸ್ತೆ, ಬೆಂಗಳೂರು-560001.
06. ನಿರ್ದೇಶಕರು, ವೈದ್ಯಕೀಯ ಕಾಲೇಜು ಶಿಕ್ಷಣ, ಬೆಂಗಳೂರು-560001.
07. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560001
08. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು -560001
09. ಕುಲಸಚಿವರು(ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
10. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
11. ಮುಖ್ಯಸ್ಥರು/ಸಂಯೋಜಕರು ಎಲ್ಲಾ ಅಧ್ಯಯನ ವಿಭಾಗಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು.
12. ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
13. ಉಪ ಕುಲಸಚಿವರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
14. ನಿರ್ದೇಶಕರು, ಕಾ.ಅ.ಮಂ., ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
15. ಗ್ರಂಥಪಾಲಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
16. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
17. ಸಂಯೋಜಕರು, ಕ್ರೀಡಾ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
18. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
19. ಕಛೇರಿ ಪ್ರತಿ.

ದಿನಾಂಕ **24.02.2026** ರಂದು ಮಂಗಳವಾರ ಬೆಳಗ್ಗೆ **11:00** ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿರುವ "ಸಿಂಡಿಕೇಟ್ ಸಭಾಂಗಣ"ದಲ್ಲಿ ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.

ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು :

| | |
|---|---|
| 1) ಡಾ. ಶಿವಾನಂದ ಕೆಳಗಿನಮನಿ, ಗೌರವಾನ್ವಿತ ಕುಲಪತಿಗಳು | – ಅಧ್ಯಕ್ಷರು |
| 2) ಡಾ. ನಾಗರತ್ನ ಎಂ. ನಾಯ್ಕ್ | – ಸದಸ್ಯರು (ಆನ್‌ಲೈನ್) |
| 3) ಶ್ರೀ ಶ್ರೇಯಂಕ್ ಹೆಚ್. ವಿ. | – ಸದಸ್ಯರು |
| 4) ಡಾ. ಮೀನಾಕ್ಷಿ ಖಂಡಿಮಠ | – ಸದಸ್ಯರು |
| 5) ಶ್ರೀ ಡಿ.ಆರ್. ಚಿನ್ನ | – ಸದಸ್ಯರು |
| 6) ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ | – ಸದಸ್ಯರು |
| 7) ಶ್ರೀ ಶಿವಣ್ಣ ವಕೀಲರು ಕವಿತಾಳ | – ಸದಸ್ಯರು |
| 8) ಶ್ರೀ ಚನ್ನಬಸವ ತಂದೆ ಬಸವರಾಜಪ್ಪ | – ಸದಸ್ಯರು |
| 9) ಶ್ರೀ ಚಂದ್ರಶೇಖರ ಲಿಂಗದಳ್ಳಿ | – ಸದಸ್ಯರು |
| 10) ಪ್ರೊ. ಪಾರ್ವತಿ ಸಿ.ಎಸ್., ಡೀನರು: ಶಿಕ್ಷಣ ನಿಕಾಯ (ಪ್ರಭಾರ) | – ಸದಸ್ಯರು |
| 11) ಡಾ. ಸುಯಮೀಂದ್ರ ಕುಲಕರ್ಣಿ, ಹಣಕಾಸು ಅಧಿಕಾರಿ (ಪ್ರಭಾರ) | – ವಿಶೇಷ ಆಹ್ವಾನಿತರು |
| 12) ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) | – ಸದಸ್ಯರು |
| 13) ಡಾ. ಚನ್ನಪ್ಪ ಎ., ಕೆ.ಎ.ಎಸ್. (ಸೀನಿಯರ್ ಸೂಪರ್ ಟೈಂ ಸ್ಕೇಲ್) | – ಸದಸ್ಯ ಕಾರ್ಯದರ್ಶಿಗಳು |

ಆರಂಭದಲ್ಲಿ ಕುಲಪತಿಗಳು ಹಾಜರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರನ್ನು ಸ್ವಾಗತಿಸುತ್ತಾ ಸಭೆಯನ್ನು ನಡೆಸಲು ಕುಲಸಚಿವರಿಗೆ ವಹಿಸಿದರು. ಕುಲಸಚಿವರು ಸಭೆಯ ಕಾರ್ಯಸೂಚಿಯ ಪ್ರಕಾರವಾಗಿ ಸಭೆಯ ಮುಂದೆ ವಿಷಯಗಳನ್ನು ಮಂಡಿಸಿದರು.

**ವಿಷಯ ಕ್ರಮಾಂಕ 1**

ದಿನಾಂಕ 12.11.2025ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿ ಕುರಿತು ಚರ್ಚೆ

**ನಿರ್ಣಯ:**

**ದಿನಾಂಕ 12.11.2025 ರಂದು ಜರುಗಿದ ಸಿಂಡಿಕೇಟ್ ಸಭೆಯ ಚರ್ಚಿತ ವಿಷಯಗಳ ಕುರಿತು ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮಗಳ ಕುರಿತು, ಸಿಂಡಿಕೇಟ್ ಸಭೆಯು ಅನುಮೋದಿಸಿತು.**

**ವಿಷಯ ಕ್ರಮಾಂಕ 2**

ದಿನಾಂಕ 07.01.2026ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು ಚರ್ಚೆ.

**ಚರ್ಚೆ:**

ದಿನಾಂಕ 07.01.2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂದರ್ಭದಲ್ಲಿ ಶ್ರೀ ಚಂದ್ರಶೇಖರ ಲಿಂಗದಳ್ಳಿ ದಿನಾಂಕ 12.11.2025 ರಂದು ಜರುಗಿದ ಅಧ್ಯಕ್ಷರ ಅನುಮತಿಯ ಮೇರೆಗೆ ವಿಷಯ ಕ್ರಮಾಂಕ 13ರ ಉಪ ವಿಷಯ ಕ್ರಮಾಂಕ 2ರಲ್ಲಿ ನಿರ್ಣಯದಲ್ಲಿ

"ಸಿಂಡಿಕೇಟ್ ಸಭೆಯಲ್ಲಿ ಹಾಜರಾದ ಸದಸ್ಯರುಗಳಿಗೆ ಆಸನ ಭತ್ಯೆಯನ್ನು ರೂ. 6000/- ರಂತೆ ಹೆಚ್ಚಿಸುತ್ತಾ ಸದರಿ ಆಸನ ಭತ್ಯೆಯು ದಿನಾಂಕ 11.12.2025 ರ ಸಭೆಯಿಂದ ಅನ್ವಯವಾಗುವಂತೆ ಹಾಗೂ ಸದರಿ ಹೆಚ್ಚುವರಿ ಆಸನ ಭತ್ಯೆಯನ್ನು ಲೆಕ್ಕ ಪರಿಶೋಧಕರ ಆಕ್ಷೇಪಣೆಯ ಷರತ್ತಿಗೆ ಒಳಪಟ್ಟು ಪರಿಷ್ಕರಿಸಲು ತೀರ್ಮಾನಿಸಲಾಯಿತು. ಮುಂದುವರೆದು, ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ನೀಡುವ ಪ್ರಯಾಣ ಭತ್ಯೆಯ ಆದೇಶವನ್ನು ತೆಗೆದುಕೊಂಡು ಅದರನುಸಾರ ನೀಡಲು ತೀರ್ಮಾನಿಸಲಾಯಿತು" ಎಂಬ ನಿರ್ಣಯಕ್ಕೆ ಸಂಬಂಧಿಸಿದಂತೆ ದಿನಾಂಕ 11.12.2025 ರಿಂದ ಅನ್ವಯವಾಗುವುದನ್ನು ದಿನಾಂಕ 02.05.2025 ರಿಂದ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪರಿಷ್ಕರಿಸಿರುವ ಪ್ರಯುಕ್ತ ನಮಗೂ ಕೂಡ ಅದೇ ದಿನಾಂಕದಿಂದ ಅನ್ವಯವಾಗುವಂತೆ ಪರಿಷ್ಕರಿಸಲು ಸಭೆಗೆ ತಿಳಿಸಿದರು.

ನಿರ್ಣಯ

**ದಿನಾಂಕವನ್ನು 02.05.2025 ರಿಂದ ಅನ್ವಯವಾಗುವಂತೆ ಪರಿಷ್ಕರಿಸಿ ಆಸನ ಭತ್ಯೆ ರೂ. 6,000/- (ಲೆಕ್ಕ ಪರಿಶೋಧಕರ ಆಕ್ಷೇಪಣೆಯ ಷರತ್ತಿಗೆ ಒಳಪಟ್ಟು) ನಿಗದಿಪಡಿಸಿ ಉಳಿದಂತೆ ಮೇಲಿನ ನಿರ್ಣಯವನ್ನು ಯಥಾ ರೀತಿ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತಿರ್ಮಾನಿತು.**

**ಚರ್ಚೆ**

ದಿನಾಂಕ 07.01.2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂದರ್ಭದಲ್ಲಿ ಡಾ. ಮೀನಾಕ್ಷಿ ಖಂಡಿಮಠ ಇವರು ವಿಷಯ ಕ್ರಮಾಂಕ 03ರ ನಿರ್ಣಯದಲ್ಲಿ **"ವಿಶ್ವವಿದ್ಯಾನಿಲಯವು ಈಗಾಗಲೇ ನಿಗದಿಪಡಿಸಿದ ಎಸ್‌ಎಸ್‌ಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವ ಫೀ ಸ್ಟಕ್ಚರ್ ಪ್ರಕಾರ ಎಲ್ಲಾ ವಿದ್ಯಾರ್ಥಿಗಳಗೆ ಶಿಷ್ಯ ವೇತನ ಮಂಜೂರಾಗಿರುತ್ತದೆ ಮತ್ತು ಖಾಸಗಿ ಕಾಲೇಜುಗಳು ವಿಶ್ವವಿದ್ಯಾನಿಲಯ ನಿಗದಿ ಪಡಿಸಿದ ಶುಲ್ಕವನ್ನು ವಸೂಲಿ ಮಾಡಿರುತ್ತಾರೆ ಇದರನ್ವಯ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ ಕಾಲೇಜುವಾರು ಬಾಕಿ ಪಟ್ಟಿಯನ್ವಯ ಶುಲ್ಕಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಂದಾಯ ಮಾಡಿಸಿಕೊಳ್ಳಲು ತಿರ್ಮಾನಿಸಲಾಯಿತು.**

**ಖಾಸಗಿ ಕಾಲೇಜುಗಳು ವಿಶ್ವವಿದ್ಯಾನಿಲಯವು ನಿಗದಪಡಿಸಿರುವ ನೋಂದಣಿ ಶುಲ್ಕ ಮತ್ತು ಪ್ರವೇಶ ಶುಲ್ಕ ಈ ಕುರಿತಾತ ಗೊಂದಲಗಳು ಏರ್ಪಟ್ಟಿರುವುದರಿಂದ ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಿ ವಿಶ್ವವಿದ್ಯಾನಿಲಯವು ಪತ್ರವನ್ನು ಬರೆಯಲಾಗಿರುತ್ತದೆ ಹಾಗೂ ಸರ್ಕಾರವು ಸಹಾ ಏಕರೂಪದ ಶುಲ್ಕವನ್ನು ಅಳವಡಿಸಿಕೊಳ್ಳುವ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಕೆಲವೊಂದು ನಿರ್ದೇಶನಗಳನ್ನು ಸಹಾ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಮುಂದಿನ ಶೈಕ್ಷಣಿಕ ವರ್ಷ 2026-27ನೇ ಸಾಲಿನಿಂದ ಸರ್ಕಾರ ನಿಗದಿಪಡಿಸಿರುವ ಶುಲ್ಕ ನೀತಿಯನ್ನು ಅಳವಡಿಕೊಳ್ಳುವುದು ಸೂಕ್ತವೆಂದು ಸಭೆಯು ತೀರ್ಮಾನಿಸಿತು"** ವಿಶ್ವವಿದ್ಯಾಲಯವು ತನ್ನ ಅಡಿಯಲ್ಲಿ ಬರುವ ಎಲ್ಲಾ ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರ ಸಭೆಯನ್ನು ಏರ್ಪಡಿಸಲು ಕೋರಿದರು ಇದಕ್ಕೆ ಶ್ರೀ ಡಿ.ಆರ್. ಚಿನ್ನ, ಶ್ರೀ ಶ್ರೇಯಂಕ್ ಹೆಚ್. ವಿ. ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇದಕ್ಕೆ ಧ್ವನಿಗೂಡಿಸಿದರು.

ನಿರ್ಣಯ:

**ದಿನಾಂಕ 12.03.2026 ಅಥವಾ 13.03.2026 ರಂದು ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ಸಂಯೋಜಿತ ಸ್ನಾತಕೋತ್ತರ ಕಾಲೇಜುಗಳ ಶೈಕ್ಷಣಿಕ ಚಟುವಟಿಕಗಳ ಕುರಿತು ಚರ್ಚಿಸಲು ಶುಲ್ಕ ಸಮಿತಿಯ ಅಡಿಯಲ್ಲಿ ಪ್ರಾಂಶುಪಾಲರ ಸಭೆಯನ್ನು ಅಯೋಜಿಸಲು ಸಭೆಯು ತಿರ್ಮಾನಿಸಿತು.**

**ಚರ್ಚೆ**

ದಿನಾಂಕ 07.01.2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂದರ್ಭದಲ್ಲಿ ಶ್ರೀ ಶ್ರೇಯಂಕ್ ಹೆಚ್. ವಿ. ಇವರು ವಿಷಯ ಕ್ರಮಾಂಕ 05ರ ನಿರ್ಣಯದಲ್ಲಿ **"ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ತೆರೆಯಲು ಅನುಮೋದಿಸಲಾಯಿತು."** ಸದರಿ ಬ್ಯಾಂಕ್ ಖಾತೆಯನ್ನು ಹೆಚ್ಚಿನ ಬಡ್ಡಿ ಬರುವ ಖಾಸಗಿ ಬ್ಯಾಂಕನಲ್ಲಿ ತೆಗೆದರೆ ಸೂಕ್ತ ಎಂದು ತಿಳಿಸಿದರು ಇದಕ್ಕೆ ಉತ್ತರವಾಗಿ ಮಾನ್ಯ ಕುಲಸಚಿವರು ಸರ್ಕಾರ ನಿರ್ದೇಶನದಂತೆ ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿಯೇ ತೆರೆಯಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

**ನಿರ್ಣಯ:**

**ರಾಷ್ಟ್ರೀಕೃತ ಬ್ಯಾಂಕನಲ್ಲಿ ಖಾತೆಯನ್ನು ತೆರೆಯಲು ಸಭೆಯು ಅನುಮೋದಿಸಿತು.**

**ಚರ್ಚೆ**

ದಿನಾಂಕ 07.01.2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂದರ್ಭದಲ್ಲಿ ಡಾ. ನಾಗರತ್ನ ಎಂ. ನಾಯ್ಕ್ ಇವರು ಅಧ್ಯಕ್ಷರ ಅನುಮತಿ ಮೇರೆಗೆ ವಿಷಯ ಕ್ರಮಾಂಕ 10ರ ಉಪ ಕ್ರಮಾಂಕ 04 ರ ನಿರ್ಣಯದಲ್ಲಿ ಪ್ಯಾರಾ *"ಆದರೆ ಸಿಂಡಿಕೇಟ್ ಸದಸ್ಯರೊಬ್ಬರು ಪ್ರಶ್ನಾರ್ಥಕ ಚಿಹ್ನೆಗಳ ಮೂಲಕ ಸಭೆಯ ಅಧ್ಯಕ್ಷರನ್ನು ಪ್ರಶ್ನಿಸುವುದು ಸೂಕ್ತವಲ್ಲ ಎಂದು ತಿಳಿಸಿದರು ಹಾಗೆಯೇ ವಿಶ್ವವಿದ್ಯಾನಿಲಯದ ಸೇವೆ ಸಲ್ಲಿಸುತ್ತಿರುವ ಸಹ ಪ್ರಾಧ್ಯಾಪಕರುಗಳು ಇವರಿಗೆ ನೀಡಿರುವ ಹೆಚ್ಚುವರಿ ಜವಾಬ್ದಾರಿಯ ಬಗ್ಗೆ ಮತ್ತು ದೈನಂದಿನ ಹಾಜರಾತಿಯ ಬಗ್ಗೆ ಚರ್ಚಿಸಿದಾಗ ಸಿಡಿಸಿ ಪ್ರಭಾರ ನಿರ್ದೇಶಕರಾದ ಡಾ. ಸುಯಮೀಂದ್ರ ಕುಲ್ಕರ್ಣಿಯವರು ನಮಗೆ ಯಾವುದೇ ಹೆಚ್ಚುವರಿ ಜವಾಬ್ದಾರಿಗಳು ಬೇಕಾಗಿರುವುದಿಲ್ಲ ದಿನನಿತ್ಯದ ಪಾಠ ಪ್ರವಚನಗಳನ್ನು ಮುಗಿಸಲು ಅವಕಾಶವನ್ನು ನೀಡಿ ಹೆಚ್ಚುವರಿ ಜವಾಬ್ದಾರಿಯಿಂದ ಬಿಡುಗಡೆಗೊಳಿಸಲು ಕೋರಿದರು"* ಈ ಪ್ಯಾರಾವನ್ನು ಕೈಬಿಡಲು ಕೋರಿದರು.

**ನಿರ್ಣಯ:**

**ಸದರಿ ನಿರ್ಣಯದಲ್ಲಿ ಮೇಲಿನ ಪ್ಯಾರವನ್ನು ಕೈಬಿಡಲು ಸಭೆಯು ಅನುಮೋದಿಸಿತು.**

**ಚರ್ಚೆ:**

ದಿನಾಂಕ 07.01.2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂದರ್ಭದಲ್ಲಿ ಅಧ್ಯಕ್ಷರ ಅನುಮತಿ ಮೇರೆಗೆ ವಿಷಯ ಕ್ರಮಾಂಕ 10ರ ಉಪ ಕ್ರಮಾಂಕ 09 ರ ನಿರ್ಣಯವನ್ನು ದೃಡೀಕರಿಸುವ ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಡಿ.ಆರ್. ಚಿನ್ನ ಹಾಗೂ ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರುಗಳು ಶ್ರೀ ಪಂಪಾಪತಿ ಇವರನ್ನು ಇನ್ನು ಎಷ್ಟು ದಿನಗಳವರೆಗೆ ಮುಂದುವರೆಸಲಾಗುವುದು ಎಂದು ಮಾಹಿತಿಯನ್ನು ಕೇಳಿದರು ಇದಕ್ಕೆ ಉತ್ತರವಾಗಿ ಈಗಾಗಲೇ ವಿಶ್ವವಿದ್ಯಾಲಯವು ಲೋಕೋಪಯೋಗಿ ಇಲಾಖೆಯಲ್ಲಿ ತಾಂತ್ರಿಕ ಸಹಾಯಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಜಿ.ಎನ್.ಪ್ರಕಾಶ್ ಇವರ ಸೇವೆಯನ್ನು ತೆಗೆದುಕೊಳ್ಳಲಾಗಿದ ಎಂದು ತಿಳಿಸಿದರು ವೇತನದ ಬಗ್ಗೆ ಸಿಂಡಿಕೇಟ್ ಸದಸ್ಯರು ವಿವರವನ್ನು ಕೇಳಿದಾಗ ಇನ್ನು ಸದರಿಯವರಿಗೆ ಗೌರವ ಸಂಭಾವನೆ ನಿಗದಿಯಾಗಿರುವುದಿಲ್ಲ ಸದರಿಯವರ ನಿವೃತ್ತಿ ವೇತನ ಮಂಜೂರಾದ ಮೇಲೆ ನಿಯಮಾನುಸಾರ ಗೌರವ ಸಂಭಾವನೆಯನ್ನು ನಿಗದಿಪಡಿಸಲಾಗುವುದು ಎಂದು ಹಾಗೂ ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಅವಶ್ಯಕತೆಯ ಅನುಗುಣವಾಗಿ ಶ್ರೀ ಪಂಪಾಪತಿ ಇವರ ಸೇವೆಯನ್ನು ಸ್ಥಗಿತಗೊಳಿಸುವ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು ಎಂದು ಸಭೆಗೆ ಕುಲಸಚಿವರು ತಿಳಿಸಿದರು

**ನಿರ್ಣಯ:**

**ವಿಶ್ವವಿದ್ಯಾನಿಲಯದ ಕಟ್ಟಡ ನಿರ್ಮಾಣ ವಿಭಾಗದಲ್ಲಿಯ ಕಾರ್ಯದೊತ್ತಡದ ಅನುಗುಣವಾಗಿ ಮಾನ್ಯ ಕುಲಪತಿಗಳು ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದು ಸಭೆಯು ತಿರ್ಮಾನಿಸಿತು.**

**ಚರ್ಚೆ:**

ದಿನಾಂಕ 07.01.2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂದರ್ಭದಲ್ಲಿ ಅಧ್ಯಕ್ಷರ ಅನುಮತಿ ಮೇರೆಗೆ ವಿಷಯ ಕ್ರಮಾಂಕ 10ರ ಉಪ ಕ್ರಮಾಂಕ 10 ರ ನಿರ್ಣಯಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಡಿ.ಆರ್. ಚಿನ್ನ ಚರ್ಚಿಸುತ್ತಾ ಸದರಿ ವಿಷಯದ ಕುರಿತು ಇನ್ನೂ ಸಮಿತಿಯು ರಚನೆಯಾಗದ ಸಂದರ್ಭದಲ್ಲಿ ಶ್ರೀ ಮಂಜುನಾಥ ಹೊರಗುತ್ತಿಗೆ ನೌಕಕರು ಈ ವಿಚಾರದಲ್ಲಿ ಅನೇಕ ಮಾಹಿತಿಗಳನ್ನು ಕೇಳುತ್ತಿದ್ದು ವಿಶ್ವವಿದ್ಯಾಲಯದ ತಾಂತ್ರಿಕ ಸಹಾಯಕರು ಎಂಬ ಪದನಾಮವನ್ನು ಬಳಸಿ ಒಂದು ಏಜೆನ್ಸಿಕಡೆಯಿಂದ ನೇಮಕಾತಿ ಗೊಂಡಿರುವ ಇವರು ಅನವಶ್ಯಕವಾಗಿ

ಆಡಳಿತಾತ್ಮಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದು ಅವರನ್ನು ಸೇವೆಯಿಂದ ಹಿಂತೆಗೆದುಕೊಳ್ಳುವಂತೆ ಏಜೆನ್ಸಿಯವರಿಗೆ ಸೂಚಿಸಬಹುದೆಂದು ಸಭೆ ನಿರ್ಣಯಿಸಿತು. ಸದರಿ ಸಮಿತಿಗೆ ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರ ಅಧ್ಯಕ್ಷತೆಯಲ್ಲಿ ಶ್ರೀ ಡಿ.ಆರ್. ಚಿನ್ನ ಹಾಗೂ ಶ್ರೀ ಚಂದ್ರಶೇಖರ ಲಿಂಗದಳ್ಳಿ ಮೂರು ಸದಸ್ಯರ ಹಾಗೂ ಉಪ-ಕುಲಸಚಿವರು (ಆಡಳಿತ) ಸದಸ್ಯ ಕಾರ್ಯದರ್ಶಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಿ ಸದರಿ ಸಮಿತಿಯ ಒಂದು ತಿಂಗಳುಗಳಲ್ಲಿ ವರದಿಯನ್ನು ನೀಡಲು ಸಭೆಯು ನಿರ್ಣಯಿಸಿತು.

**ನಿರ್ಣಯ: ಸಭೆಯು ಅನುಮೋದಿಸಿತು.**

**ವಿಷಯ ಕ್ರಮಾಂಕ 3**

ದಿನಾಂಕ 23.01.2026ರಂದು ನಡೆದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು.

**ನಿರ್ಣಯ : ದೃಢೀಕರಿಸಲಾಯಿತು.**

**ವಿಷಯ ಕ್ರಮಾಂಕ 4**

ಶ್ರೀ. ಡಿ.ಆರ್.ಚಿನ್ನ ಸಿಂಡಿಕೇಟ್ ಸದಸ್ಯರ ಇ-ಮೇಲ್ ಪತ್ರ ದಿನಾಂಕ 21.01.2026 ವಿಷಯಗಳ ಕುರಿತು.

1. As per clause No 48 (1), the Syndicate shall prepare with assistance of Finace officer about the financial estimates of the university. The same is not carried out since I am also the part of Finance committe and no syndicate members were also involved for this activity for the year 2025-26 financial year budgeting of the university. Please share the compete budget for every with complete breakup of the university internal funds through students fees and other grants of central & state governaments funds

2. As per cluase No 48 (3), The budgeting supplimentary if any along with orginal budget need to be placed before October every year. The same is not done for this year. Please prepare the additinal budgeting done if any for the Syndicate review and approval. This need to be recorded in writing for such supplimentory budgets

3. As per clause No. 50, The syndicate shall prepare the annual report containing all the particulars highligting the activities of the university, target and achievements concerning each financial year and submitt it to the Academic council before 30th June. The Academic Council may pass resolutions thereon and refer back the annual reports of 2024-25 to the Syndicate for compliance for compliance. The same is not complied this year 30th June 2026.

ಚರ್ಚೆ:

ಶ್ರೀ ಡಿ.ಆರ್.ಚಿನ್ನ ಸಿಂಡಿಕೇಟ್ ಸದಸ್ಯರು, ಇವರ ಮೇಲಿನ ವಿಷಯಗಳ ಕುರಿತು ಚರ್ಚಿಸಲಾಗಿ ಕ್ರಮಾಂಕ 01 ಮತ್ತು 02 ರ ಅಂಶಗಳ ಕುರಿತಂತೆ ದಿನಾಂಕ 30.05.2025 ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ 2024-25ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಅನುಮೋದನೆಯನ್ನು ಹಾಗೂ ದಿನಾಂಕ 02.08.2025 ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ವಿಶ್ವವಿದ್ಯಾಲಯದ 2025-26ನೇ ಸಾಲಿನ ವಾರ್ಷಿಕ ಆಯ್ಯವ್ಯಯ ಅಂದಾಜುಗಳ ಅನುಮೋದನೆಯನ್ನು ಪಡೆಯಲಾಗುರುತ್ತದೆ ಮತ್ತು ದಿನಾಂಕ 13.09.2025 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಲಾಗಿರುತ್ತದೆ ಹಾಗೂ ಕ್ರಮಾಂಕ 03 ರ ಅಂಶಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಸಿದ್ದತೆ ಹಂತದಲ್ಲಿರುತ್ತದೆ ಪೂರ್ಣಗೊಂಡ ನಂತರ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗುವುದು ಎಂದು ಕುಲಸಚಿವರು ತಿಳಿಸಿದರು.

**ನಿರ್ಣಯ:**

**ಅನುಮೋದಿಸಿತು ಮತ್ತು ಸದರಿ 2025–26ನೇ ಸಾಲಿನ ವಾರ್ಷಿಕ ಆಯ್ಯವ್ಯಯ ಅಂದಾಜುಗಳನ್ನು ಪ್ರತಿಗಳನ್ನು ಸಿಂಡಿಕೇಟ್ ಸದಸ್ಯರುಗಳಿಗೆ ನೀಡಲು ಸಿಂಡಿಕೇಟ್ ಸಭೆಯು ಒಪ್ಪಿಗೆ ಸೂಚಿಸಿತು.**

**ವಿಷಯ ಕ್ರಮಾಂಕ 5**

ಶ್ರೀ ಆಲೇಶಪ್ಪ ಕಿರಿಯ ಸಹಾಯಕ ಇವರ ಪತ್ರ ದಿನಾಂಕ 19.12.2025 ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಕುರಿತು.

ನಿರ್ಣಯ:

**ಹುದ್ದೆ ಸಹಿತವಾಗಿ ವರ್ಗಾವಣೆ ಬಯಸಿದಲ್ಲಿ ಮತ್ತೋಮ್ಮೆ ಚರ್ಚಿಸಿ ಅನುಮೋದನೆಯನ್ನು ನೀಡುವುದು ಎಂದು ಸಭೆಯು ತಿರ್ಮಾನಿಸಿತು.**

**ವಿಷಯ ಕ್ರಮಾಂಕ 06 ಅಧ್ಯಕ್ಷರ ಅನುಮತಿ ಮೇರೆಗೆ ವಿಷಯಗಳು**

**ಕ್ರಮಾಂಕ 01:**

ಈ ಹಿಂದೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸಿದ ಸಿಬ್ಬಂದಿಗಳ ವೇತನ ಪಾವತಿಸುವ ಕುರಿತು.

ಚರ್ಚೆ:

ಈ ವಿಷಯ ಕುರಿತು ಸುದೀರ್ಘವಾಗಿ ಚರ್ಚಿಸಲಾಗಿ ಈಗಾಗಲೇ ಪರೀಕ್ಷಾ ವಿಭಾಗದ ಪರೀಕ್ಷಾ ಕಾರ್ಯಗಳಿಗೆ ಅವಶ್ಯಕತೆಗೆ ಅನುಸಾರ ದೈನಂದಿನ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸುಮಾರು 87 ಜನರನ್ನು ಸಂಭಾವನೆ ಮಂಜೂರ ಮಾಡಿ ಕೆಲಸದಿಂದ ಬಿಡುಗಡೆಗೊಳಿಸಲಾಗಿತ್ತು ಉಳಿದಂತೆ ಇನ್ನೂ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ಸಿಬ್ಬಂದಿಗಳ ಸಂಭಾವನೆಯನ್ನು ನೀಡುವಂತೆ ಮನವಿಯನ್ನು ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಚನ್ನಬಸವ ತಂದೆ ಬಸವರಾಜಪ್ಪ ಇವರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಿವರಿಗೆ ಪರೀಕ್ಷಾ ವಿಭಾಗದಲ್ಲಿ ಸಂಭಾವನೆಯನ್ನು ನೀಡಿ ಕೆಲಸದಿಂದ ಬಿಡುಗಡೆಗೊಳಿಸಿದಂತೆ ಇವರಿಗೂ ಸಹ ಸಂಭಾವನೆಯನ್ನು ನೀಡುವುದು ಎಂದು ತಿಳಿಸಿದರು.

ನಿರ್ಣಯ:

**ಸಿಂಡಿಕೇಟ್ ಸದಸ್ಯರು ಹಾಗೂ ಹಿರಿಯ ನ್ಯಾಯವಾದಿಗಳಾದ ಶ್ರೀ ಚಂದ್ರಶೇಖರ ಲಿಂಗದಳ್ಳಿಯವರ ಅಧ್ಯಕ್ಷತೆಯಲ್ಲಿ ಶ್ರೀ ಶಿವಣ್ಣ ವಕೀಲರು ಕವಿತಾಳ ಹಾಗೂ ಶ್ರೀ ಶ್ರೇಯಂಕ್ ಹೆಚ್. ವಿ. ಇವರನ್ನು ಒಳಗೊಂಡಂತೆ ಮೂರು ಜನ ಸದಸ್ಯರ ಹಾಗೂ ಉಪ-ಕುಲಸಚಿವರು (ಆಡಳಿತ) ಸದಸ್ಯ ಕಾರ್ಯದರ್ಶಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವರದಿಯನ್ನು ಪಡೆದು ಚರ್ಚಿಸಲು ತೀರ್ಮಾನಿಸಲಾಯಿತು.**

**ಕ್ರಮಾಂಕ 02:**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದಲ್ಲಿ "ಯೋಗ ವಿಜ್ಞಾನ" ಕೋರ್ಸ್ ಪ್ರಾರಂಬಿಸುವ ಕುರಿತು.

ನಿರ್ಣಯ:

**ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಅನುಮೋದಿಸಿತು.**

**ಕ್ರಮಾಂಕ 03:**

ವಿಶ್ವವಿದ್ಯಾನಿಲಯಕ್ಕೆ ವಿವಿಧ ಪ್ರದೇಶಗಳಿಂದ ಬರುವ ವಿಷಯ ತಜ್ಞರಿಗೆ ತಂಗಲು ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡಲು ನಗರ ಕಛೇರಿ/ಅತಿಥಿ ಗೃಹ ಬಾಡಿಗೆಗೆ ಪಡೆಯುವ ಬಗ್ಗೆ.

**ಚರ್ಚೆ:**

ಮಾನ್ಯ ಕುಲಸಚಿವರು ಸಭೆಗೆ ವಿವರಿಸುತ್ತಾ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯವು ನೂತನವಾಗಿ ಸ್ಥಾಪನೆಯಾಗಿದ್ದು ರಾಯಚೂರು ನಗರದಿಂದ ಸುಮಾರು 20 ಕಿ.ಮೀ. ದೂರದಲ್ಲಿ ಆವರಣವನ್ನು ಹೊಂದಿದ್ದು ಪ್ರಸ್ತುತ ಆವರಣದಲ್ಲಿ ಅತಿಥಿ ಗೃಹ ನಿರ್ಮಾಣವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯ ವಿವಿಧ ಶೈಕ್ಷಣಿಕ/ಪರೀಕ್ಷಾ/ಆಡಳಿತಾತ್ಮಕ ಸಭೆಗಳಿಗೆ ಆಗಮಿಸುವ ಪ್ರಾಧ್ಯಾಪಕರು/ಅಧಿಕಾರಿಗಳ/ಅತಿಥಿಗಳಿಗೆ ರಾಯಚೂರು ನಗರದಲ್ಲಿ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಬೇಕಾಗಿರುತ್ತದೆ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಉಂಟಾಗುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ತನ್ನದೇ ಆದ ಅತಿಥಿ ಗೃಹ ನಿರ್ಮಾಣವಾಗುವವರೆಗೆ ರಾಯಚೂರು ನಗರದಲ್ಲಿ ಒಂದು ಸುಸಜ್ಜಿತ ಕಟ್ಟಡವನ್ನು ಗುರುತಿಸಿ ಸದರಿ ಕಟ್ಟಡವನ್ನು ನಿಯಮಾನುಸಾರ ನಗರ ಕಚೇರಿ/ಅತಿಥಿ ಗೃಹ ಎಂದು ಬಾಡಿಗೆ ಆಧಾರದ ಮೇಲೆ ತೆಗೆದುಕೊಳ್ಳುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.

**ನಿರ್ಣಯ:**

**ನಗರದಲ್ಲಿ ಒಂದು ಸುಸಜ್ಜಿತವಾದ 03 ಅಥವಾ 04 ಬಿಹೆಚ್‌ಕೆ ಮನೆ/ಕಟ್ಟಡವನ್ನು ಗುರುತಿಸಿ ಲೋಕೋಪಯೋಗಿ ಇಲಾಖೆಯಿಂದ ಬಾಡಿಗೆಯನ್ನು ನಿಗದಿಪಡಿಸಿ ಬಾಡಿಗೆ ಪಡೆಯಲು ಸಭೆಯು ಅನುಮೋದಿಸಿತು.**

**ಕ್ರಮಾಂಕ 04:**

ದಿನಾಂಕ 27.01.2025 ರ ಸಿಂಡಿಕೇಟ್ ಐಟಂ ಸಂಖ್ಯೆ 3 ರಲ್ಲಿ BOA ರಚಿಸಲು ವಿವಿಧ ವಿಭಾಗಗಳ ವಿಷಯತಜ್ಞರ ಪಟ್ಟಿಯನ್ನು ಅಂಗೀಕರಿಸಲಾಗಿತ್ತು. ಈ ಪಟ್ಟಿಯಲ್ಲಿ ಅನೇಕ ವಿಷಯತಜ್ಞರ ಹಲವಾರು ಜನ ನಿವೃತ್ತಿ ಹೊಂದಿರುವುದರಿಂದ ಸದರಿ ಪಟ್ಟಿಯನ್ನು ಪರಿಷ್ಕರಿಸುವ ಕುರಿತು.

**ಚರ್ಚೆ**

ಮಾನ್ಯ ಕುಲಸಚಿವರು ಸಭೆಗೆ ವಿವರಿಸುತ್ತಾ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯವು ಈ ಮುಂದೆ ರಚಿಸಿರುವ BOA ವಿಷಯತಜ್ಞರ ಪಟ್ಟಿಯಲ್ಲಿಯರುವ ಪ್ರಾಧ್ಯಾಪಕರುಗಳು ವಯೋನಿವೃತ್ತಿ ಹೊಂದಿರುವ ಪ್ರಯುಕ್ತ ಸದರಿ ಪಟ್ಟಿಯಿಂದ ಪ್ರಾಧ್ಯಾಪಕರುಗಳನ್ನು ಬದಲಿಸಲು ಹಾಗೂ ಜೇಷ್ಠತೆಯ ಆಧಾರದ ಮೇಲೆ ವಿಷಯತಜ್ಞರ ಪಟ್ಟಿಯನ್ನು ನಿಯಮಾನುಸಾರ ರಚಿಸಲು ಸಭೆಗೆ ತಿಳಿಸಿದರು ಇದಕ್ಕೆ ಉತ್ತರವಾಗಿ ಕೆಲವು ಸಿಂಡಿಕೇಟ್ ಸದಸ್ಯರುಗಳು ಸದರಿಯವರ ಹೆಸರುಗಳನ್ನು ಸಭೆಗೆ ತಿಳಿಸಲು ಕೋರಿದರು ಇದಕ್ಕೆ ಉತ್ತರವಾಗಿ ಕುಲಸಚಿವರು ವಿಷಯತಜ್ಞರ ಪಟ್ಟಿಯ ಗೌಪ್ಯವಾಗಿರುವುದರಿಂದ ಸಭೆಗೆ ತಿಳಿಸಲು ಬರುವುದಿಲ್ಲ ಎಂದು ತಿಳಿಸಿದರು.

**ನಿರ್ಣಯ: ಚರ್ಚಿಸಲಾಯಿತು.**

ಕುಲಸಚಿವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಕುಲಪತಿಗಳಿಗೆ ಹಾಗೂ ಸರ್ವ ಗೌರವಾನ್ವಿತ ಸದಸ್ಯರುಗಳಿಗೆ ವಂದಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

12/3

**ಡಾ. ಚನ್ನಪ್ಪ ಎ., ಕೆ.ಎ.ಎಸ್**
**ಕುಲಸಚಿವರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು**

12/3/26

**ಪ್ರೊ. ಶಿವಾನಂದ ಕೆಳಗಿನಮನಿ**
**ಕುಲಪತಿಗಳು**
**ಹಾಗೂ ಅಧ್ಯಕ್ಷರು**